SAMYUKTHA KARNATAKA, March 17, 2014, Page no. 02

# ಸರ್ಕಾರ ಪಡಿತರ ವಿತರಿಸಿದರೆ ಸೋರಿಕೆ ತಡೆ




**ಬೆಂಗಳೂರು, ಮಾ. 14:** ಪಡಿತರ ವಿತರಣೆ ಖಾಸಗಿಯವರಿಗೆ ವಹಿಸಿದ್ದರಿಂದ ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ಪಡಿತರ ದೊರೆಯುತ್ತಿಲ್ಲ ಎಂದು ಭಾರತೀಯ ಸಾಮಾಜಿಕ ಭದ್ರತಾ ಸಂಘದ ನಿವೃತ್ತ ಕಾರ್ಯದರ್ಶಿ ಆರ್. ಕೆ.ಸುಬ್ರಹ್ಮಣ್ಯ ಹೇಳಿದರು.

ನಗರದಲ್ಲಿ ಆಯೋಜಿಸಿದ ಸಾಮಾಜಿಕ ರಕ್ಷಣೆ ಮತ್ತು ಆಹಾರ ಭದ್ರತೆ ಕುರಿತು ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಅವರು, ಪಡಿತರ ವಿತರಣೆಯಲ್ಲಿ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರವೇ ಪಡಿತರ ವಿತರಣೆ ಮಾಡಬೇಕು. ಇದ-ರಿಂದ ಕೇಂದ್ರದ ಮೌಲ್ಯಮಾಪನದ ಪ್ರಕಾರ ಶೇ. 50ರಷ್ಟು ದುರುಪಯೋಗವಾಗುತ್ತಿದ್ದು, ಸರ್ಕಾರವೇ ಪಡಿತರ ವಿತರಣೆ ಮಾಡುವುದರಿಂದ ದುರುಪಯೋಗವನ್ನು ತಡೆಯಬಹುದು ಎಂದು ತಿಳಿಸಿದರು.

ಪಡಿತರ ವಿತರಣೆಯಲ್ಲಿ ಫಲಾನುಭಗಳಿಗಿಂತ ಕಾಳಸಂತೆ ಹಾಗೂ ಮಧ್ಯವರ್ತಿಗಳಿಗೆ ಹೆಚ್ಚು ಪಾಲಾಗುತ್ತಿದೆ, ಇದನ್ನು ತಪ್ಪಿಸಲು ಸರ್ಕಾರವೇ ನೇರವಾಗಿ ಪಡಿತರ ವಿತರಣೆ ಮಾಡುವುದರಿಂದ ಮಧ್ಯವರ್ತಿಗಳ ಹಾವಳಿಯನ್ನು ತಡೆಯಲು ಸಾಧ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನಿವೃತ್ತ ಐಎಎಸ್ ಅಧಿಕಾರಿ ಭಟ್ಟಾಚಾರ್ಯ ಮಾತನಾಡಿ, ಬಡ ಜನತೆಗೆ ಸಮರ್ಪಕವಾಗಿ ಪಡಿತರ ವಿತರಣೆಯಾಗುತ್ತಿಲ್ಲ, ವಿತರಣೆಯಲ್ಲಿ ಬಹಳಷ್ಟು ಸೋರಿಕೆಯಗುತ್ತಿದೆ. ಜರ್ಮನ ದೇಶದಲ್ಲಿ ಹೋಲಿಸಿದರೆ ನಮ್ಮ ದೇಶದಲ್ಲಿ ಸೋರಿಕೆ ಹೆಚ್ಚಿದೆ ಎಂದರು.

ನಮ್ಮಲ್ಲಿ ಕನಿಷ್ಠ ಶಿಕ್ಷಣದ ದೊರೆಯುತ್ತಿಲ್ಲ. ಇದರಿಂದ ಜನಸಾಮಾನ್ಯರಲ್ಲಿ ಸರ್ಕಾರಿ ಯೋಜನೆಗಳ ಕುರಿತು ಅರಿವಿಲ. ಪ್ರತಿ ಹಂತದಲ್ಲಿ ಯೋಜನೆಗಳ ಸೌಲಭ್ಯಗಳು ದುರುಪಯೋಗವಾಗುತ್ತಿವೆ.

ಇದನ್ನು ಕೇವಲ ಶಿಕ್ಷಣದ ಮೂಲಕ ಜಾಗೃತಿ ಮೂಡಿಸಲು ಸಾಧ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸೋಶಿಯಲ್ ಪ್ರೊಟೆಕ್ಷನ್ ಪ್ಲೋರ್ ಫುಡ್ ಸೆಕ್ಯೂರಿಟಿ ಅಸೋಸಿಯೇಷನ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಸೋಮು. ಜರ್ಮನಿಯ ಸಲಹೆಗಾ ಪ್ರವೀಣ್ ಸಿನ್ಹ ಸೇರಿದಂತೆ ಉಪಸ್ಥಿತರಿದ್ದರು.